International Journal of Kannada Research 2018; 4(2): 21-22




International Journal of Kannada Research
www.kannadajournal.com

**ISSN: 2454–5813**
IJKR 2018; 4(2): 21-22
© 2018 IJKR
www.kannadajournal.com
Received: 07-02-2018
Accepted: 08-03-2018

**Dr. MB Katti**
Post-Doctoral Fellow (PDF)
Department of Kannada,
Gulbarga University Gulbarga,
Karnataka, India

**Correspondence**
**Dr. MB Katti**
Post-Doctoral Fellow (PDF)
Department of Kannada,
Gulbarga University Gulbarga,
Karnataka, India

# ದಲಿತ ಚಳುವಳಿಯ ಒಳನೋಟ

**Dr. MB Katti**

ದಲಿತ ಸಾಹಿತ್ಯದ ಹುಟ್ಟಿಗೆ ಮೂಲ ಬೀಜ ಅಂಬೇಡ್ಕರ್‌ವಾದ. ದಲಿತ ಬರಹಗಾರರಿಗೆ ಮುಖ್ಯ ಪ್ರೇರಣೆ ಮತ್ತು ಪ್ರಭಾವ ಡಾ. ಬಿ.ಆರ್. ಅಂಬೇಡ್ಕರ್. ದಲಿತರಿಗೆ ಅವರು ಸ್ವಾಭಿಮಾನದ ಸಂಕೇತ, ಭಾರತೀಯ ಸಮಾಜ ಮತ್ತು ರಾಷ್ಟ್ರದ ಸತ್ವಹೀನತೆಯನ್ನು ನೇರವಾಗಿ ಗುರುತಿಸಿ, ಆಳವಾಗಿ ಹಾಗೂ ವಿಸ್ತರವಾಗಿ ಅಭ್ಯಸಿಸಿ, ಅದನ್ನು ವೈಯಕ್ತಿಕ ದುಃಖದಿಂದ ಅನುಭವಿಸಿ, ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹೋರಾಟವನ್ನು ಹುಟ್ಟುಹಾಕಿದ ವಿಶ್ವಶ್ರೇಷ್ಠ ಚಿಂತಕ ಡಾ. ಬಿ.ಆರ್. ಅಂಬೇಡ್ಕರ್.

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ನಡೆದ ರಾಷ್ಟ್ರೀಯ ಚಳುವಳಿಯಿಂದ ಪ್ರೇರಿತವಾದ ಹಲವಾರು ಜನ ಗಾಂಧಿ ಅನುಯಾಯಿಗಳು ದಲಿತೋದ್ಧಾರದಂಥ ಪ್ರಗತಿಪರ ಕೆಲಸಗಳನ್ನು ಮಾಡಿದ್ದುಂಟು. ಗೋಪಾಲ ಸ್ವಾಮಿ ಅಯ್ಯರ್, ತಗದೂರು ರಾಮಚಂದ್ರ ರಾಯರು, ಕುದ್ಮಲ್ ರಂಗರಾಯರು, ವಿಜಾಪುರದ ಕಾರ್ಖಾನೀಸ್, ಹರ್ಡೇಕರ್ ಮಂಜಪ್ಪ, ಕಾರ್ನಾಡ ಸದಾಶಿವರಾವ್, ಸಿ.ಆರ್. ರೆಡ್ಡಿ ಮೊದಲಾದವರು ದಲಿತರಲ್ಲಿ ಹುಟ್ಟಿಸಿದ ಸ್ವಾಭಿಮಾನಕ್ಕೆ ಐತಿಹಾಸಿಕ ಪ್ರಾಮುಖ್ಯತೆ ಇದೆ. ಆದರೆ ಬಹುಮುಖ್ಯ ಘಟನೆ ಜರುಗಿದ್ದು 1969ರಲ್ಲಿ. ಆಗಿನ ಕರ್ನಾಟಕದ ಮುಖ್ಯ ಮಂತ್ರಿಯಾಗಿದ್ದ ದೇವರಾಜ ಅರಸರ ನೇತೃತ್ವದಲ್ಲಿ ಎಲ್.ಜಿ. ಹಾವನೂರರು ಮಂಡಿಸಿದ ವರದಿಯ ಜಾರಿಗಾಗಿ 1969ರ ಏಪ್ರಿಲ್ 14 ಡಾ. ಅಂಬೇಡ್ಕರ್ ಜನುಮದಿನದಂದು ನಡೆಸಿದ ಆಂದೋಲನದಿಂದಾಗಿ ದಲಿತ ಬುದ್ಧಿ ಜೀವಿಗಳೆಲ್ಲ ಒಂದು ನಿರ್ದಿಷ್ಟ ಕಾರಣಕ್ಕೆ ಒಂದು ಗೂಡಿದರು. ನಂತರ 1973ರಲ್ಲಿ ನಡೆದ ಬಸವಲಿಂಗಪ್ಪನವರ ಬೂಸಾ ಪ್ರಕರಣದಲ್ಲಿ ಈ ಎಲ್ಲಾ ಬುದ್ಧಿ ಜೀವಿಗಳು ಸಕ್ರಿಯವಾಗಿ ಪಾಲ್ಗೊಂಡರು. 1973ರಲ್ಲಿ ರಾಜಕಾರಣಿಯಾಗಿದ್ದ ಬಸವಲಿಂಗಪ್ಪನವರು ದಲಿತರು ತಲೆಯಲ್ಲಿ ಮಲಹೊರುವದನ್ನು ನಿಲ್ಲಿಸಲು ಕೂಗೆಬ್ಬಿಸಿದರು. ಇದರ ಜೊತೆಗೆ ದೇವರು, ಧರ್ಮ-ಜಾತಿಯ ವಿರುದ್ಧ ಕರ್ನಾಟಕದ ಯುವಜನತೆ ಕೂಗೆಬ್ಬಿಸಿತು. ಪರಿಣಾಮವಾಗಿ 1973ರ ಅಗಸ್ಟ್ 25 ಮತ್ತು 26 ರಂದು ಮೈಸೂರಿನಲ್ಲಿ 'ಜಾತಿ ವಿನಾಶ ಸಮ್ಮೇಳನ' ನಡೆಯಿತು. ಈ ಸಮ್ಮೇಳನದ ಹಿಂದೆ ಲೋಹಿಯಾ ಅವರ ವೈಚಾರಿಕತೆಯಿತ್ತು. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ರಾಮದಾಸ್, ಶ್ರೀಕೃಷ್ಣ ಆಲನಹಳ್ಳಿ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಮೊದಲಾದವರೆಲ್ಲ ಈ ಸಮ್ಮೇಳನದಲ್ಲಿ ಪಾಲ್ಗೊಂಡು ಕರ್ನಾಟಕದಾದ್ಯಂತ ಒಂದು ಬಗೆಯ ರೋಮಾಂಚನ ಉಂಟು ಮಾಡಿದರು. ಇದೇ ಜನಗಳು ಮುಂದೆ 1974ರಲ್ಲಿ ಏಪ್ರಿಲ್ 20 ಮತ್ತು 21 ರಂದು ಬರಹಗಾರರ ಮತ್ತು ಕಲಾವಿದರ ಒಕ್ಕೂಟ ರಚಿಸಿಕೊಂಡು ಮೈಸೂರಿನಲ್ಲಿ ಸಮ್ಮೇಳನ ನಡೆಸಿದರು. ಶೂದ್ರಪ್ರಜ್ಞೆ ಇನ್ನೊಮ್ಮೆ ಸ್ವಾಭಿಮಾನದ ಸಂಕೇತವಾಯಿತು. ಈ ಸಮ್ಮೇಳನದಲ್ಲಿ ಕುವೆಂಪು ಅವರ ಮಾಡಿದ ಉದ್ಘಾಟನಾ ಭಾಷಣ ಅನೇಕರ ರಕ್ತವನ್ನು ಬೆಚ್ಚಗಾಗಿಸಿತು. 'ಕನ್ನಡ ಸಾಹಿತ್ಯದಲ್ಲಿರುವದೆಲ್ಲಾ ಬೂಸಾ' ಎಂದು ಹೇಳಿದ ಬಸವಲಿಂಗಪ್ಪನವರು ಆ ಕಾರಣಕ್ಕಾಗಿಯೇ ತಮ್ಮ ಮಂತ್ರಿ ಪದವಿಯನ್ನು ಕಳೆದುಕೊಂಡರೂ, ಸ್ವಸ್ಥ ಚಿತ್ತರಾಗಿ ನಿದ್ರಿಸುತ್ತಿದ್ದ ಸಾಂಪ್ರದಾಯಿಕ ಸಾಹಿತಿಗಳ ಚಿತ್ತವನ್ನು ಕೆಡಿಸುವದರಲ್ಲಿ ಯಶಸ್ವಿಯಾದರು. ಜಡವಾಗಿದ್ದ ಸಾಹಿತಿಗಳ ಸಮುದಾಯ ಮೈ ಕೊಡವಿ ನಿಲ್ಲುವಂತಾಯಿತು. ದಲಿತರು ಜಾಗೃತರಾಗತೊಡಗಿದರು. 1974 ರಲ್ಲಿ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ರೂಪುಗೊಂಡಿತು. ಮುಂದೆ ಇದು ಕರ್ನಾಟಕ ದಲಿತ ಸಂಘರ್ಷ ಸಮಿತಿಯಾಗಿ ಬೆಳೆದು ದಲಿತರ ಸಂರಕ್ಷಣೆಗೆ ಕಟಿಬದ್ಧವಾಯಿತು. ಕರ್ನಾಟಕದಾದ್ಯಂತ ಪಸರಿಸಿಕೊಂಡ ದಲಿತ ಸಂಘರ್ಷ ಸಮಿತಿಯು ದಲಿತರ ಮೇಲಾಗುವ ದೌರ್ಜನ್ಯದ ವಿರುದ್ಧ ಎತ್ತಿದ ಸ್ವರ ಅಸಾಧಾರಣವಾದುದು. ಮುಂದೆ ಇದು 'ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ದಲಿತ ಕಲಾ ಮಂಡಳಿ, ದಲಿತ ನೌಕರರ ಒಕ್ಕೂಟ, ದಲಿತ ವೈದ್ಯರ ಒಕ್ಕೂಟ ಹೀಗೆ ಅಂಗ ಸಂಸ್ಥೆಗಳನ್ನು ಹಲವಾರು ಸಹ ಸಂಘಟನೆಗಳನ್ನು ಕಟ್ಟಿ ಬೆಳೆಸಿತು. ದಲಿತ ಸಾಹಿತ್ಯದಲ್ಲಿ ಗಟ್ಟಿಯಾಗಿ ಬೆಳೆಸಿದ್ದಲ್ಲದೆ,

ಅದರ ದನಿ ಬೀದಿ ಬೀದಿಯಲ್ಲಿ ಕೇಳಿಸುವಂತೆ ಮಾಡಿದ್ದು ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಸಾಹಿತ್ಯ ಚಳವಳಿ.

ಕಾಂಗ್ರೆಂಸ್ ಸರ್ಕಾರ ತನ್ನ ಬೂರ್ಜ್ವಾ ಉದಾರತ್ವದ ಫಲವಾಗಿ 70ರ ದಶಕದಲ್ಲಿ ಭೂಮಸೂದೆ ಕರ್ನಾಟಕದಾದ್ಯಂತ ಜಾರಿಗೆ ಬಂತು. ದೇವರಾಜ ಅರಸರು ಈ ನಿಟ್ಟಿನಲ್ಲಿ ಕ್ರಾಂತಿಕಾರೀ ಹೆಜ್ಜೆ ಇಟ್ಟು ಕೆಲಸಮಾಡಿದರು. ಜಮೀನು ಇಲ್ಲದ ಅಸಂಖ್ಯಾತ ಜನರು ಇದರಿಂದಾಗಿ ಜಮೀನು ಪಡೆದಂತಾಯಿತು. ಖಾಸಗೀ ಜಮೀನನ್ನು ಹೊಂದಿದ ಕೆಳವರ್ಗದ ಜನರಲ್ಲಿ ಮಾಡಿದ ಸ್ವಾಭಿಮಾನವಂತು ಚಾರಿತ್ರಿಕವಾದುದು. ಹೀಗೆ ಭೂಮಸೂದೆಯ ಕಾರಣದಿಂದಾಗಿ ಜಮೀನು ಸಂಬಂಧದಲ್ಲಾದ ಬದಲಾವಣೆ ಅಂತಿಮವಾಗಿ ಸಾಹಿತ್ಯದ ಮೇಲೂ ಪರಿಣಾಮ ಬೀರಿತು. ಇದರ ಜೊತೆಗೆ ಕಾಂಗ್ರೇಸ್ ಸರಕಾರ ಜಾರಿಗೆ ತಂದ ಮೀಸಲಾತಿ ಕ್ರಮದಿಂದಲೂ ಹತ್ತಾರು ಬದಲಾವಣೆಗಳು ಗೋಚರಿಸಿದವು. ಸುಶಿಕ್ಷಿತ ದಲಿತರು ಕಾಣಿಸಿಕೊಳ್ಳಲಾರಂಭಿಸಿದ ಕೆಲವು ತಿಂಗಳಲ್ಲಿಯೇ ಭದ್ರಾವತಿಯಲ್ಲಿ 1976ರಲ್ಲಿ ದಲಿತ ಬರಹಗಾರರ ಯುವ ಸಂಘಟನೆ ರೂಪುಗೊಂಡಿತು. ಇದರ ಹಿಂದೆ ಮುಂದೆ ಮಾರ್ಕ್ಸವಾದಿಗಳೇ ಓಡಾಡುತ್ತಿದ್ದರು. 1975ರ ಜೂನ್ 25 ರಂದು ಜಾರಿಗೆ ಬಂದ 'ತುರ್ತು ಪರಿಸ್ಥಿತಿಯಿಂದಾಗಿ' ಕರ್ನಾಟಕದ ಕೆಲವು ಬರಹಗಾರರು ಮತ್ತು ಕಲಾವಿದರು ಬೀದಿಗಿಳಿಯಬೇಕಾಯಿತು. ಕೆಲವರು ಭೂಗತರಾಗಿದ್ದುಕೊಂಡು ತುರ್ತು ಪರಿಸ್ಥಿತಿಯನ್ನು ವಿರೋಧಿಸಿದರು. ಚಂದ್ರಶೇಖರ ಪಾಟೀಲರು ಜೈಲುವಾಸ ಅನುಭವಿಸಿದರು. ಇಂಥ ಘಟನೆಗಳು ಸಾಹಿತಿಗಳ ಮೈಛಳಿ ಬಿಡಿಸಿದಂತೂ ನಿಜ, ಹೀಗಾಗಿ ಸಾಹಿತಿಗಳು ತಮಗೆ ರಾಜಕೀಯ ಕಾಳಜಿ ಅಗತ್ಯ ಮತ್ತು ಭಾರತದಲ್ಲಿ ಅನಿವಾರ್ಯ ಎಂದು ಭಾವಿಸಲು ಆರಂಭಿಸಿದರು.

ಇವೆಲ್ಲವುಗಳ ಮಧ್ಯಯೇ ಮಾರ್ಚ್ 10, 1976 ರಂದು ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. ಅದಕ್ಕೆ ಗೋಪಾಲಕೃಷ್ಣ ಅಡಿಗರು ಅಧ್ಯಕ್ಷರಾದರು. ಸಮ್ಮೇಳನದಲ್ಲಿ ದಲಿತ ಸಾಹಿತ್ಯದ ಬಗ್ಗೆ ಪ್ರತ್ಯೇಕ ಕವಿ ಗೋಷ್ಠಿಯನ್ನಿಡಲು ಕನ್ನಡ ಸಾಹಿತ್ಯ ಪರಿಷತ್ತು ಒಪ್ಪದೇ ಇದ್ದುದರಿಂದ ದಲಿತ ಪರ ಬಂಡಾಯ ಸಾಹಿತಿಗಳೆಲ್ಲರೂ ಪ್ರತ್ಯೇಕವಾಗಿ ಸಮ್ಮೇಳನ ನಡೆಸಲು ನಿರ್ಧರಿಸಿದರು. ಅದುವರೆಗೆ ಸಾಹಿತ್ಯದಲ್ಲಿ ಬೆಳೆದು ಬಂದಿದ್ದ ಅಸಮಧಾನ ಸ್ಫೋಟಗೊಳ್ಳಲು ಧರ್ಮಸ್ಥಳ ಸಾಹಿತ್ಯ ಸಮ್ಮೇಳನ ಒಂದು ನೆಪವಾಯಿತು. ಹೀಗೆ ಹುಟ್ಟಿಕೊಂಡ ಬಂಡಾಯ ಚಳುವಳಿಯಿಂದ 1983ರ ಡಿಸೆಂಬರ್ 10 ಮತ್ತು 11 ರಂದು ದಲಿತರು ಬೇರ್ಪಟ್ಟರು. ಅವರು ಧಾರವಾಡದಲ್ಲಿ ದಲಿತ ಲೇಖಕರ ಕಲಾವಿದರ ಬಳಗವನ್ನು ರಚಿಸಿಕೊಂಡರು. ದಲಿತ ಸಂಘರ್ಷ ಸಮಿತಿಯು ಇಬ್ಭಾಗಗೊಂಡ ಪ್ರಯುಕ್ತ 1986ರ ಡಿಸೆಂಬರ್ 21 ರಂದು ಬೆಂಗಳೂರಿನಲ್ಲಿ ದಲಿತ ಸಾಹಿತಿಗಳ ಸಮ್ಮೇಳನ ನಡೆಯಿತು ಇವೆಲ್ಲವೂ ದಲಿತರಲ್ಲಾದ ಎಚ್ಚರದ ಪರಿಣಾಮಗಳು.

ದಲಿತ ಸಂಘರ್ಷ ಸಮಿತಿ ಸಂಘಟನೆ ಮತ್ತು ಹೋರಾಟಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದೆ ಡಾ. ಅಂಬೇಡ್ಕರ್ ಅವರು ಶಿಕ್ಷಣ, ಸಂಘಟನೆ, ಹೋರಾಟ ಎಂಬ ಮೂರು ಮೂಲ ಮಂತ್ರಗಳನ್ನು ದಲಿತರಿಗೆ ಕೊಟ್ಟಿದ್ದಾರೆ. ಡಾ. ಅಂಬೇಡ್ಕರ್ ಅವರ ಈ ತತ್ವವನ್ನು ದಲಿತ ಸಾಹಿತ್ಯ ಮತ್ತು ದಲಿತ ಸಂಘರ್ಷ ಸಮಿತಿ ಸಂಪೂರ್ಣವಾಗಿ ಸ್ವೀಕರಿಸಿತು. ಪ್ರಥಮವಾಗಿ ಕೈಗೊಂಡ ಹೋರಾಟವೆಂದರೆ ಪುರೋಹಿತಶಾಹಿ ವಿರುದ್ಧದ ಹೋರಾಟ. ಪ್ರೊ. ಬಿ. ಕೃಷ್ಣಪ್ಪ ಅವರು, ಬ್ರಾಹ್ಮಣ್ಯ ಅದು ಜಾತಿ ಆಧಾರಿತವಲ್ಲ. ಅದೊಂದು ಮನೋಸ್ಥಿತಿ. ಪರಂಪರೆಯಿಂದ ಬಂದ ಮೂಢನಂಬಿಕೆ, ಕಂದಾಚಾರ, ಹೀನ ಸಂಪ್ರದಾಯ, ಆಚರಣೆ ಶಾಸ್ತ್ರ, ಮಾಟಮಂತ್ರ, ಪುನರ್‌ಜನ್ಮ, ಸ್ವರ್ಗ-ನರಕ ಮೊದಲಾದವುಗಳನ್ನು ಪ್ರಶ್ನಿಸದೇ ಒಪ್ಪುವುದು ಮತ್ತು ಪಾಲಿಸುವುದನ್ನು ಬ್ರಾಹ್ಮಣ್ಯ ಒತ್ತಾಯಿಸುತ್ತದೆ. ದಲಿತ ಚಳವಳಿ ಇದನ್ನು ದಿಕ್ಕರಿಸಿತು.

ಬಂಡವಾಳಶಾಹಿ ವಿರುದ್ಧದ ಹೋರಾಟದಲ್ಲಿ ದಲಿತ ಚಳುವಳಿ ಸಕ್ರಿಯವಾಗಿ ಕಾರ್ಯ ನಿರ್ವಹಿಸತೊಡಗಿತು. ಪ್ರಭುತ್ವದ ವಿರುದ್ಧ ಹೋರಾಟ, ಜಾತಿ ಮತ್ತು ಅಸ್ಪೃಶ್ಯತೆ ವಿರುದ್ಧ ಹೋರಾಟ, ಭೂ ಹೋರಾಟ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ, ಸಾಂಸ್ಕೃತಿಕ ಹೋರಾಟಗಳು, ಬೆತ್ತಲೆ ಸೇವೆಯ ವಿರುದ್ಧ ಹೋರಾಟಗಳನ್ನು ಹಮ್ಮಿಕೊಳ್ಳುತ್ತಲೇ ದಲಿತ ಚಳವಳಿ ಸಾಮಾಜಿಕ ನ್ಯಾಯಕ್ಕಾಗಿ. ಸಾಮಾಜಿಕ ಸಮಾನತೆಗಾಗಿ, ಹೋರಾಟ ನಡೆಸು. ತ್ತಲೇ ಬಂದಿದೆ.

**ಆಕರ ಗ್ರಂಥಗಳು**


1. ದಲಿತ ಅಧ್ಯಯನ – ಸಂ. ಡಾ. ಡಿ.ಆರ್. ಚಂದ್ರಶೇಖರ.
2. ದಲಿತ ಚಳುವಳಿ – ಡಾ. ಸಣ್ಣರಾಮ
3. ಬಂಡಾಯ–ದಲಿತ ಸಾಹಿತ್ಯ – ಡಾ. ಪುರುಷೋತ್ತಮ ಬಿಳಿಮಲೆ
4. ದಲಿತ ಚಿಂತನೆ – ಸಂ. ಮೊಗಳ್ಳಿ ಗಣೇಶ
5. ದಲಿತ ಸಾಹಿತ್ಯ ಸಮೀಕ್ಷೆ– ಡಾ. ವಿ. ಮುನಿವೆಂಕಟಪ್ಪ